ಮಾರ್ಗವಾಗಿ ಆಂಧ್ರ ಪ್ರದೇಶ ಗಡಿಯವರೆಗಿನ ರಾಹೆ–63ನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಸದರಿ ಕಾಮಗಾರಿಯ ಗುತ್ತಿಗೆ ಅನುಮೋದನೆ ಹಂತದಲ್ಲಿದ್ದು, ಶೀಘ್ರದಲ್ಲಿ ಇ.ಪಿ.ಸಿ., ಗುತ್ತಿಗೆಯಡಿ ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲಾಗುವುದು;

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚವು ಈ ಕೆಳಕಂಡಂತಿದೆ;–

ವರ್ಷ	ಅನುದಾನ ₹ ಲಕ್ಷಗಳಲ್ಲಿ	ವೆಚ್ಚ ₹ ಲಕ್ಷಗಳಲ್ಲಿ
2012–13	80.60	79.45
2013–14	1193.22	1178.47
2014–15	789.00	789.00

ಹೆಚ್ಚುವರಿ ಬಡ್ಡಿ ವಸೂಲಿ

1795(384); ಶ್ರೀ ಅಂಗಾರ ಎಸ್. (ಸೂಳ್ಯ)

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಮಂಗಳೂರು ಇವರು 2004–05 ರಿಂದ 2008–09 ರವರೆಗೆ ರೈತರಿಗೆ ನೀಡಲಾದ ಕೃಷಿ ಸಾಲ (ಬೆಳೆ ಸಾಲ) ಮೇಲೆ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸರ್ಕಾರದ ಆದೇಶದ ವಿರುದ್ಧವಾಗಿ 0.5% ಹೆಚ್ಚುವರಿಯಾಗಿ ಬಡ್ಡಿಯನ್ನು ವಸೂಲಿ ಮಾಡಲು ಸರ್ಕಾರ ಅನುಮತಿ ನೀಡಿದೆಯೇ? ನೀಡದೇ ಇದ್ದಲ್ಲಿ ಸರ್ಕಾರದ ಆದೇಶದ ವಿರುದ್ಧವಾಗಿ ಹೆಚ್ಚುವರಿಯಾಗಿ ಬಡ್ಡಿ ಸಂಗ್ರಹಿಸಲಾದ ಕೇಂದ್ರ ಸಹಕಾರಿ ಬ್ಯಾಂಕ್‌ನ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಆ) ಹೆಚ್ಚುವರಿಯಾಗಿ 0.5% ಬಡ್ಡಿ ಸಂಗ್ರಹಿಸಲಾದ ಹಣವೆಷ್ಟು? ಸಹಕಾರ ಸಂಘವಾರು, ವರ್ಷವಾರು ವಿವರ ನೀಡುವುದು?

ಶ್ರೀ ಹೆಚ್.ಸಿ. ಮಹದೇವಪ್ರಸಾದ್ (ಮಾನ್ಯ ಸಹಕಾರ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಮಂಗಳೂರು ಇವರು 2004–05 ರಿಂದ 2008–09 ರವರೆಗೆ ರೈತರಿಗೆ ನೀಡಲಾದ ಕೃಷಿ ಸಾಲ (ಬೆಳೆ ಸಾಲ) ಮೇಲೆ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸರ್ಕಾರದ ಆದೇಶದ ವಿರುದ್ದವಾಗಿ 0.5% ಹೆಚ್ಚುವರಿಯಾಗಿ ಬಡ್ಡಿಯನ್ನು ವಸೂಲಿ ಮಾಡಲು ಸರ್ಕಾರ ಅನುಮತಿ ನೀಡಿರುವುದಿಲ್ಲ.

ರೈತರಿಗೆ ನೀಡಲಾದ ಕೃಷಿ ಸಾಲಗಳ (ಬೆಳೆ ಸಾಲ) ಮೇಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ಸರ್ಕಾರದ ಆದೇಶದ ವಿರುದ್ದವಾಗಿ 0.5% ಹೆಚ್ಚುವರಿ ಬಡ್ಡಿಯನ್ನು ವಸೂಲಿ ಮಾಡಿರುವುದಿಲ್ಲವೆಂದು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಉಪ ನಿಬಂಧಕರು ದಕ್ಷಿಣ ಕನ್ನಡ ಜಿಲ್ಲೆ ಇವರು ವರದಿ ಮಾಡಿರುತ್ತಾರೆ.

ಹೆಚ್ಚುವರಿಯಾಗಿ ಬಡ್ಡಿ ಸಂಗ್ರಹಿಸದೆ ಇರುವುದರಿಂದ ಕೇಂದ್ರ ಸಹಕಾರ ಬ್ಯಾಂಕಿನ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಾಲ ಮನ್ನಾ ಮಾಡುವ ಬಗ್ಗೆ

1796(1228); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ರೈತರ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;

ಆ) ಈ ಹಿಂದೆ ಮನ್ನ ಮಾಡಿದ ಹಣವನ್ನು ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲಾಗಿದೆಯೇ; ಬಾಕಿ ಇರುವ ಮೊತ್ತ ಎಷ್ಟು;

ಇ) ಬಾಕಿ ಮೊತ್ತ ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?